

# ತಂದೆ... ಕಿವುಡನ ಮಾಡಯ್ಯ ಎಂದೆ...

‘ಕೆಟ್ಟದ್ದನ್ನು ಕೇಳಲಾರೆ’ ಎಂದು ಕಿವಿಗಳನ್ನು ಮುಚ್ಚಿಕೊಂಡುಬಿಟ್ಟರೆ ಒಳ್ಳೆಯದೂ ಕೇಳಿಸುವುದಿಲ್ಲವಲ್ಲ! ಈ ಸಮಸ್ಯೆ ರಾಮರಾಯರಿಗೆ ಇಲ್ಲ. ಏಕೆಂದರೆ ಅವರೆಂದೂ ಕಿವಿ ಮುಚ್ಚಿಕೊಂಡವರಲ್ಲ. ಕಿವಿ ಮುಚ್ಚಿಕೊಳ್ಳುವ ಪಾಳಿ ಎದುರಿನವರದು!

■ ಜಿ.ವಿ. ಗಣೇಶಯ್ಯ

ಗಾಂಧೀಜಿಯವರ ಹತ್ತಿರ ಮೂರು ಕೋತಿಗಳ ವಿಗ್ರಹಗಳಿದ್ದವೆಂದು ಕೇಳಿದ್ದೇವಷ್ಟೆ. ಅವುಗಳಲ್ಲಿ ಒಂದು ಕೋತಿಯದು ‘ಕೆಟ್ಟದ್ದನ್ನು ಕೇಳಲಾರೆ’ ಎನ್ನುವ ವ್ರತ. ಕೆಟ್ಟ ಮಾತನ್ನು ಕೇಳಿಸಿಕೊಳ್ಳುವುದೇ ಬೇಡ ಎನ್ನುವ ಕಾರಣದಿಂದಾಗಿ ಅದು ಮೂಗು ಮುಚ್ಚಿಕೊಂಡಿದೆ. ಇಲ್ಲೊಂದು ಸಮಸ್ಯೆಯಿದೆ. ‘ಕೆಟ್ಟದ್ದನ್ನು ಕೇಳಲಾರೆ’ ಅಂತ ಕಿವಿಗಳನ್ನು ಮುಚ್ಚಿಕೊಂಡುಬಿಟ್ಟರೆ ಒಳ್ಳೆಯದೂ ಕೇಳಿಸುವುದಿಲ್ಲವಲ್ಲ! ಈ ಜ್ಞಾನ ಆ ಕೋತಿಗೆ ಇದ್ದಿದ್ದರೆ ಅದು ಕೋತಿ ಎನಿಸಿಕೊಳ್ಳುತ್ತಿರಲಿಲ್ಲ.  ಬದಲಿಗೆ ಕಿಲಾಡಿ ಮನುಷ್ಯ ಅನ್ನಿಸಿಕೊಳ್ಳುತ್ತಿತ್ತು. ಇದು ನನ್ನ ಅನಿಸಿಕೆ.

ಬಸವಣ್ಣನವರು ಕೂಡ ‘ಮತ್ತೊಂದು ಕೇಳದಂತೆ ಕಿವುಡನ ಮಾಡಯ್ಯ ತಂದೆ’ ಅಂತ ದೇವರಲ್ಲಿ ವಿಜ್ಞಾಪನೆ ಮಾಡಿಕೊಂಡಿದ್ದಾರೆ. ಯಥಾಪ್ರಕಾರ ಇಲ್ಲಿ ‘ಮತ್ತೊಂದು’ ಅಂದರೆ ‘ಕೆಟ್ಟದ್ದು’ ಅಂತಲೇ ಅರ್ಥ. ಹೀಗೆ ‘ಕಿವುಡನ ಮಾಡಯ್ಯ ತಂದೆ’ ಅಂತ ಅಂದರೆ ದೇವರನ್ನು ಕೇಳುವಾಗ – ಮತ್ತೊಂದೇ ಮಾತ್ರವಲ್ಲ, ಮಗದೊಂದೂ ಕೇಳಿಸುವುದಿಲ್ಲ ಅನ್ನುವುದು  ಅಣ್ಣನವರು ಏಕೆ ಮರೆತರು ಎನ್ನುವುದು ನನ್ನ ಕುತೂಹಲ.

ಕಿವುಡನ ಮಾಡಯ್ಯ ತಂದೆ ಎಂದರೆ ಅಂಗವಿಕಲನನ್ನಾಗಿ ಮಾಡು ಎಂದರ್ಥ. ಅಂಗವೈಕಲ್ಯವನ್ನು ದಯಪಾಲಿಸು ಅಂತ ದೇವರಲ್ಲಿ ಕೇಳಿಕೊಳ್ಳುವುದು ಒಂದು ದೊಡ್ಡ ವಿಚಾರವೇ ಸರಿ. ವಯೋಸಹಜವಾಗಿ ಕಿವಿಯ ಶ್ರವಣ ಶಕ್ತಿ ಕಡಿಮೆಯಾಗತೊಡಗಿದಾಗ ಜನರು ಶ್ರವಣ ತಜ್ಞರ ಮೊರೆ ಹೋಗುವುದು ಸಾಮಾನ್ಯ. ಅಯಾಚಿತವಾಗಿ ಬರುವ ಕಿವುಡುತನವು ಅವರಿಗೆ ಕಿರಿಕಿರಿಯನ್ನುಂಟು ಮಾಡಲೂ ಸಾಕು. ವಾಸ್ತವ ಹೀಗಿರುವಾಗ ವಯಸ್ಸಿನಲ್ಲಿದ್ದಾಗಲೇ ಕಿವುಡುತನ ಬಯಸುವುದು ಸಾಮಾನ್ಯರಿಗೆ ಸುಲಭವಂತೂ ಅಲ್ಲ.

ನಮ್ಮ ಮನೆಗೆ ಆಗಾಗ ಭೇಟಿ ಕೊಡುವ ರಾಮರಾಯರದ್ದೊಂದು ಕಥೆ ಹೀಗಿದೆ. ಅವರಿಗೀಗ ಎಂಬತ್ತರ ಆಸುಪಾಸು. ವಯೋಸಹಜ ಕಿವುಡುತನ ಅವರ ಅಪ್ಪಣೆಗೆ ಕಾಯದೆಯೇ ಅವರಿಗೆ ಬಂದು ಬಿಟ್ಟಿದೆ. ಈ ರಾಮರಾಯರೊಮ್ಮೆ ನಮ್ಮ ಮನೆಗೆ ಬಂದವರು, ‘ನನ್ನ ಮನೆಯಲ್ಲಿ ಯಾರೂ ನನ್ನನ್ನು ಮಾತನಾಡಿಸುವುದಿಲ್ಲ. ಹಾಗಾಗಿ ನಾನು ಒಂಟಿತನವನ್ನು ಅನುಭವಿಸುತ್ತಿದ್ದೇನೆ’ ಎಂದು ಅಳಲು ತೋಡಿಕೊಂಡರು.

ನನ್ನ ಮನೆಯಲ್ಲಿ ತದ್ವಿರುದ್ಧ. ನಾನು ಸ್ಪೀಚ್ ಅಂಡ್ ಹಿಯರಿಂಗ್ ಇನ್‌ಸ್ಟಿಟ್ಯೂಟ್‌ನಲ್ಲಿ ಕೆಲಸ ಮಾಡುತ್ತಿದ್ದವನು. ನನ್ನ ಹೆಂಡತಿಯದ್ದು ಬರೇ ಸ್ಪೀಚ್, ನನ್ನದು ಹಿಯರಿಂಗ್ ಮಾತ್ರ! ರಾಮರಾಯರು ಎಂತಹ ಪುಣ್ಯವಂತರು ಅಂತಂದುಕೊಂಡೆ.

ಅಂದಹಾಗೆ, ರಾಮರಾಯರ ಮನೆಯಲ್ಲಿ ಮನೆಯವರಾರೂ ಅವರೊಡನೆ ಮಾತಾಡುತ್ತಿರಲಿಲ್ಲ ಎನ್ನುವುದಕ್ಕೆ ಒಂದು ಕಾರಣವಿದೆ. ಇವರೊಡನೆ ಮಾತನಾಡಬೇಕೆಂದರೆ ದೊಡ್ಡ ಗಂಟಲಿನಲ್ಲಿ